# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯಪಾಲಕ ಅಭಿಯಂತರರು ವಾರ್ಡ್ ಸಂಖ್ಯೆ: 89- ಜೋಗುಪಾಳ್ಯ ವಾರ್ಡಿನ ದಿನಾಂಕ: 19-12-2020 ರಂದು ನಡೆದ ಸಭೆಯ ನಡವಳಿಗಳು

ಮಾನ್ಯ ಆಯುಕ್ತರು ಬಿಬಿಎಂಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)ಪಿಆರ್/35/2020-21 / 21-09-2020 ರ ಆದೇಶದಂತೆ ದಿನಾಂಕ: 19-12-2020 ರಂದು ಜಸ್ಮ ಭವನ, ಕೆ.ಬಿ.ಆರ್. ರಸ್ತೆ, ಆಸ್ಟಿನ್‌ಟೌನ್, ಬೆಂಗಳೂರು. ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

ಮಾನ್ಯ ಶ್ರೀ.ಎನ್.ಎ.ಹ್ಯಾರಿಸ್ ಶಾಸಕರು ಶಾಂತಿನಗರ ವಿಧಾನ ಸಭಾ ಕ್ಷೇತ್ರ ರವರ ಅಧ್ಯಕ್ಷತೆಯಲ್ಲಿ ವಾರ್ಡ್ ಸಮಿತಿಸಭೆಯು ದಿನಾಂಕ: 19-12-2020 ರಂದು ನಡೆಯಿತು.

### ಸಭೆಗೆ ಹಾಜರಿದ್ದವರ ವಿವರಗಳು

1) ಮಾನ್ಯ ಶ್ರೀ.ಎನ್.ಎ ಹ್ಯಾರಿಸ್, ಶಾಸಕರು, ಶಾಂತಿನಗರ ವಿಧಾನ ಸಭಾ ಕ್ಷೇತ್ರ , ಅಧ್ಯಕ್ಷರು
2) ಶ್ರೀ.ಬಿ ಮಹೇಶ್ ಕುಮಾರ್, ನೋಡಲ್ ಅಧಿಕಾರಿ,ಸಹಾಯಕ ನಿಯಂತ್ರಕರು ಹಣಕಾಸು (ಪೂರ್ವ)
3) ಶ್ರೀ. ಮೂರ್ತಿ, ವಾರ್ಡ್ ಸಮಿತಿಯ ಕಾರ್ಯದರ್ಶೀ , ಸಹಾಯಕ ಅಭಿಯಂತರರು ಹಾಗೂ ಬಿಬಿಎಂಪಿ ಇತರ ವಿಭಾಗಗಳ ಅಂದರೆ, ಅರಣ್ಯ ಆರೋಗ್ಯ, ಕಾಮಗಾರಿ, ವಿದ್ಯುತ್, ಘನತಾಜ್ಯ ವಿಭಾಗ, ಅಧಿಕಾರಿಗಳು, ಮತ್ತು BWSSB ಬೆಸ್ಕಾಂ, ಸಂಚಾರಿ/ಅರಕ್ಷಕರ ಠಾಣೆ, ಸಬ್ ಇನ್ಸ್ ಪೆಕ್ಟರ್ ಮತ್ತು ಸಿಬ್ಬಂದಿ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.
4) ವಾರ್ಡ್ ಸಮಿತಿ ಸದಸ್ಯರು,
   1) ಶ್ರೀಮತಿ. ಆಶಾ ಆಲ್ವಿನ್
   2) ಶ್ರೀಮತಿ. ಗಾಯತ್ರಿ,
   3) ಶ್ರೀ. ರಮೇಶ್ ರೆಡ್ಡಿ,
   4) ಶ್ರೀ. ವಿಜಯ್
   5) ಶ್ರೀ. ಉಮೇಶ್
   6) ಶ್ರೀ. ಶ್ರೀನಿವಾಸ ನಾಯ್ಡು ರವರು ಸಭೆಗೆ ಹಾಜರಿದ್ದರು,

ಸಭೆಯನ್ನು ಪ್ರಾರಂಭಿಸುತ್ತಾ ಮೊದಲನೆಯದಾಗಿ ನೋಡಲ್ ಅಧಿಕಾರಿಯವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಮಾನ್ಯ ಶಾಸಕರಿಗೆ ಹಾಗೂ ಹಾಜರಿದ್ದ ಅಧಿಕಾರಿಗಳನ್ನು ಮತ್ತು ಅಹ್ವಾನಿತರಾಗಿದ್ದ ಸ್ಥಳೀಯ ನಾಗರೀಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಯನ್ನು ಪ್ರಾರಂಭಿಸುತ್ತಾ ದಿನಾಂಕ: 07/12/2020 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಯನ್ನು ನೋಡಲ್ ಅಧಿಕಾರಿಯವರು ಸಂಕ್ಷಿಪ್ತವಾಗಿ ಒದುತ್ತಾ .ಒಂದೊಂದು ವಿಷಯವನ್ನು ಹಾಗೂ ಅದರ ಕ್ರಮ ತೆಗೆದುಕೊಂಡಿರುವ ಬಗ್ಗೆ ಚರ್ಚಿಸಲಾಯಿತು.

**ವಾರ್ಡ್ 89– ಜೋಗುಪಾಳ್ಯ ದಿನಾಂಕ: 19-12-2020 ರಂದು ವಾರ್ಡ್ ಸದಸ್ಯರ ಸಭೆಯಲ್ಲಿ ಚರ್ಚಿಸಿದಂತಹ ಪ್ರಮುಖ ವಿಷಯಗಳು**

1) ಹಣ್ಣು ತರಕಾರಿ ವ್ಯಾಪಾರಸ್ಥರು **SOUND SYSTEM** ಬಳಸುತ್ತಿರುವುದರಿಂದ ಸ್ಥಳಿಯ ನಾಗರೀಕ ತೊಂದರೆಯಾಗುತ್ತಿದೆ. ಆಗಾಗಿ **SOUND SYSTEM** ಬಳಸುವುದನ್ನು ಇದ್ದನ್ನು ತಡೆಗಟ್ಟಲು ಶ್ರೀನಿವಾಸ ನಾಯ್ಡು ರವರು ಮಾನ್ಯ ಶಾಸಕರಲ್ಲಿ ಕೋರಿದರು– **ಅರಕ್ಷಕ ಸಿಬ್ಬಂದಿರವರು ಕ್ರಮವಹಿಸುವುದು.**

2) 10ನೇ ಬೀದಿಯಲ್ಲಿ (PATH HOLES) ರಸ್ತೆ ಗುಂಡಿಗಳನ್ನು ಮುಚ್ಚಲು ರಮೇಶ್‌ರೆಡ್ಡಿ ರವರು ಕೋರಿದರು. **–ಶ್ರೀ. ಮೂರ್ತಿ, AE, ಬಿಬಿಎಂಪಿ ರವರು ಕ್ರಮವಹಿಸುವುದು.**

3) ಡಾ// ರಾಜ್ ಕುಮಾರ್ ಪುಥ್ಥಲಿ ಹತ್ತಿರ ನೀರು ಚಿಮ್ಮುತ್ತಿದ್ದು, ನೀರು ಚಿಮ್ಮುವುದನ್ನು ತಡೆಯಲು ಕೋರಲಾಯಿತು. **–BWSSB, AEE** ರವರು ಕ್ರಮವಹಿಸುವುದು.

4) ಬಿಬಿಎಂಪಿ ಸ್ಕೂಲ್ ನಲ್ಲಿ ಯೋಗ ಕೇಂದ್ರ ನಡೆಸಲು ಮತ್ತು ಪೂಜೆ ಮಾಡಲು ಟೀಚರ್ ರಾಜೇಶ್ವರಿ ರವರು ಮುಂದಾಗಿದ್ದು, ಇವರು ಯೋಗ ಕೇಂದ್ರ ನಡೆಸಲು ಯಾರು ಅನುಮತಿ ನೀಡಿರುವುದಿಲ್ಲ, ಆದ್ದರಿಂದ ಇದನ್ನು ತಡೆಯಲು ವಾರ್ಡ್ ಸಮಿತಿ ಸದಸ್ಯರಾದ ಶ್ರೀಮತಿ. ಗಾಯಿತ್ರಿ ರವರು ಕೋರಿದರು– **EE (ಶಾಂತಿನಗರ) ಬಿಬಿಎಂಪಿ ರವರು ಕ್ರಮವಹಿಸುವುದು.**

5) 3ನೇ ಮತ್ತು 4ನೇ ಕ್ರಾಸ್, ಚೆಂಬರ್ ಲೈನ್ ಇನ್ನೂ ಸರಿಯಾಗಿ ಸರಿಪಡಿಸಿಲ್ಲ ಪೂರ್ತಿಯಾಗಿ ಸರಿಪಡಿಸಲು ವಾರ್ಡ್ ಸಮಿತಿ ಸದಸ್ಯರಾದ (ಉಮೇಶ್) ಕೋರಿದರು **BWSSB, AEE** ರವರು ಕ್ರಮವಹಿಸುವುದು.

6) ನ್ಯಾಯ ಬೆಲೆ ಅಂಗಡಿಯಲ್ಲಿ ಸರಿಯಾಗಿ ದವಸ ಧಾನ್ಯಗಳನ್ನು ಹಂಚುತ್ತಿಲ್ಲ ಸದರಿ ಅಂಗಡಿರವರನ್ನು ವಿಚಾರಿಸಲು ವಾರ್ಡ್ ಸಮಿತಿ ಸಭೆ ಸದಸ್ಯರಾದ ಶ್ರೀಮತಿ. ಗಾಯತ್ರಿ ರವರು ಕೋರಿದರು– **ನೋಡೆಲ್ ಅಧಿಕಾರಿ ರವರು ಕ್ರಮವಹಿಸುವುದು.**

7) ಮೋಟಪ್ಪನಪಾಳ್ಯದಲ್ಲಿ ಸೊಳ್ಳೆ ನಿಯಂತ್ರಣ ಔಷಧಿಯನ್ನು ಸರಿಯಾಗಿ ಸಿಂಪಡಣೆ ಯಾಗುತ್ತಿಲ್ಲ, ಔಷಧಿ ಸಿಂಪಡಿಸಲು ಆಶಾ ಅಲ್ವಿನ್ ರವರು ಕೋರಿದರು.**–ಹಿರಿಯ ಆರೋಗ್ಯ ಅಧಿಕಾರಿ ರವರು ಕ್ರಮ ವಹಿಸುವುದು**

8) ಸಿಸಿ ಟಿವಿ ಕ್ಯಾಮರಾ ಗಳನ್ನು ವಾರ್ಡ್‌ನಲ್ಲಿ ಇನ್ನೂ ಅಳವಡಿಸಿಲ್ಲವೆಂದು ಸಭೆಯಲ್ಲಿ ಹೇಳಾಯಿತ್ತು. **– AE ವಿದ್ಯುತ್ (ಪೂರ್ವ) ಮಂಜಪ್ಪ (ಶಾಂತಿನಗರ) ಬಿಬಿಎಂಪಿ ರವರು ಕ್ರಮವಹಿಸುವುದು.**

9) ಸಾಯಿ ಬಾಬಾ ದೇವಸ್ಥಾನ, ಕೇಂಬ್ರಿಡ್ಜ್ ರಸ್ತೆ ಹತ್ತಿರ ಬಿಬಿಎಂಪಿ ಸ್ಥಳವನ್ನು, [redacted] ಆಕ್ರಮಿಸಿರುವುದನ್ನು ತೆರೆವುಗೊಳಸಿ ಪಾಲಿಕೆ ವಶಕ್ಕೆ ಪಡೆದು, ಪಾಲಿಕೆಯ ಸ್ವತ್ತೆಂದು ನಾಮಫಲಕ ಹಾಕಲು ಕೋರಲಾಯಿತು. **–ಶ್ರೀ. ಮೂರ್ತಿ, AE, ಬಿಬಿಎಂಪಿ ರವರು ಕ್ರಮವಹಿಸುವುದು.**

10) ಜೋಗುಪಾಳ್ಯ ವಾರ್ಡ್‌ನಲ್ಲಿ ಕಳ್ಳಕಕರ ಹವಾಳ ಮತ್ತು ಪುಂಡ ಪೋಕರಿಗಳ ಹವಾಳಿಯನ್ನು ತಡೆಗಟ್ಟಲು ಆರಕ್ಷಕ ಸಿಬ್ಬಂದಿ ರವರಿಗೆ ಗಸ್ತು ಹೆಚ್ಚಿಸಿ ಸೂಕ್ತ ಕ್ರಮ ಕೈಗೊಳ್ಳಲು ಮಾನ್ಯ ಶಾಸಕರು ಸೂಚಿಸಿದರು.- **ಅರಕ್ಷಕ ಸಿಬ್ಬಂದಿರವರು ಕ್ರಮವಹಿಸುವುದು**.

ಅಂತಿಮವಾಗಿ ಮೇಲ್ಕಂಡ ಎಲ್ಲಾ ವಿಷಯಗಳನ್ನು ಚರ್ಚಿಸಲಾಗಿ ಹಾಗೂ ಚರ್ಚಿಸಿದ ವಿಷಯಗಳ ಬಗ್ಗೆ ಅಧಿಕಾರಿಗಳು ಮುಂದಿನ ವಾರ್ಡ್ ಸಮಿತಿ ಸಭೆಗೆ ಸಂಬಂಧಪಟ್ಟ ಆಧಿಕಾರಿಗಳು ಕೈಗೊಂಡ ಕ್ರಮದ ವರದಿಯನ್ನು ನೀಡಲು ಮಾನ್ಯ ಶಾಸಕರು ಸೂಚಿಸಿ. ಸಭೆಯನ್ನು ಮುಕ್ತಾಯಗೊಳಿಸಿದರು.

**ನೋಡೆಲ್ ಅಧಿಕಾರಿಗಳು**
**ವಾರ್ಡ್ ಸಂಖ್ಯೆ–89– ಜೋಗುಪಾಳ್ಯ**
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯದರ್ಶಿ
**ಸಹಾಯಕ ಅಭಿಯಂತರರು**
ವಾರ್ಡ್ ಸಂಖ್ಯೆ–89– ಜೋಗುಪಾಳ್ಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು,

1) ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಜಂಟಿ ಆಯುಕ್ತರು (ಪೂರ್ವ) ರವರ ಮಾಹಿತಿಗಾಗಿ ಕಳುಹಿಸಿಕೊಡಲಾಗಿದೆ.
3) ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
4) ಮಾನ್ಯ ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
5) ವಾಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
6) ಕಛೇರಿ ಪ್ರತಿ